ನಂ·ಎಎಲ್ಎನ್:157:85–86

ವಿಶೇಷ ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಹಾಸನ ಜಿಲ್ಲೆ, ಹಾಸನ, ದಿನಾಂಕ: 30–10–86

ವಿಷಯ:– ರೈಲ್ವೆ ರಸ್ತೆಯ ಸರಹದ್ದಿನಲ್ಲಿ ರಸ್ತೆಗೆ 100 ಅಡಿ ಅಂತರಜಾಗ ಮೀಸಲಿಡುವ ಬಗ್ಗೆ.

ಉಲ್ಲೇಖ:– ವಿಭಾಗೀಯ ರೈಲ್ವೆ ಮ್ಯಾನೇಜರ್ ಮೈಸೂರು ಇವರ ಪತ್ರದ ನಂ·ವೈ·ಡಬ್ಲ್ಯೂ:271 ಜಿಎಲ್ ದಿನಾಂಕ: 1:8–10–1985.

2) ಹೊಳೇನರಸೀಪುರ, ತಹಸೀಲ್ದಾರರ ಪತ್ರದ ನಂ·ಎಲ್ಎನ್ಡಿ:ಸಿಆರ್: 154:86–87, ದಿನಾಂಕ: 19–9–86.

## ಸುತ್ತೋಲೆ

ರೈಲ್ವೆ ರಸ್ತೆಯು ಹಾದುಹೋಗುವ ಸ್ಥಳಗಳಲ್ಲಿ ರೈಲ್ವೆಸರಹದ್ದಿನಲ್ಲಿ 100 ಅಡಿ ಅಂತರ ಜಾಗ ಮೀಸಲಿಡಬೇಕೆಂದು ಸರ್ಕಾರಿ ಸುತ್ತೋಲೆಯಲ್ಲಿ ಸ್ಪಷ್ಟ ನಿರ್ದೇಶನವಿದ್ದರೂ ಹೊಳೇನರಸೀಪುರ ಪಟ್ಟಣದ ರೈಲ್ವೆ ರಸ್ತೆಯ ಅಕ್ಕಪಕ್ಕದಲ್ಲಿ ವಾಸದಮನೆ : ಕಟ್ಟಡ ಇತ್ಯಾದಿಗಳನ್ನು ಕಟ್ಟುತ್ತಿರುತ್ತಾರೆಂದೂ, ಇವುಗಳನ್ನು ಕಟ್ಟಲು ಸಂಬಂಧಪಟ್ಟ ರೈಲ್ವೆ ಇಲಾಖೆಯವರ ಅನುಮತಿ ಪಡೆಯದೆ, ಪುರಸಭೆಯವರ ಅನುಮತಿ ಪಡೆದು ಕೊಳ್ಳಲಾಗುತ್ತಿದೆ–ಯೆಂದೂ, ರೈಲ್ವೆ ರಸ್ತೆಗೆ 100 ಅಡಿ ಜಾಗವನ್ನು ಮೀಸಲಿಡಬೇಕೆಂದು ಉಲ್ಲೇಖ (1)ರಲ್ಲಿ ತಿಳಿಸಲಾಗಿದೆ.

ಜಿಲ್ಲೆಯಲ್ಲಿ ರೈಲು ರಸ್ತೆ ಹಾದುಹೋಗುವ ಸಂಬಂಧಪಟ್ಟ ಎಲ್ಲಾ ತಹಸೀಲ್ದಾರರು, ಪುರಸಭೆ : ನಗರಸಭೆ : ಮುಖ್ಯಾಧಿಕಾರಿಗಳು : ಆಯುಕ್ತರು, ನಗರ ಯೋಜನಾ ಇಲಾಖೆಯ ಅಧಿಕಾರಿಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರೈಲ್ವೆ ರಸ್ತೆ ಹಾದು ಹೋಗುವ ಕಡೆ ರೈಲ್ವೆ ರಸ್ತೆ 100 ಅಡಿ ಜಾಗಬಿಟ್ಟು ಮನೆ: ಕಟ್ಟಡ ಇತ್ಯಾದಿಗಳನ್ನು ಕಟ್ಟುವಂತೆ ಸೂಕ್ತ ಕ್ರಮಕೈಕೊಳ್ಳಲು ತಿಳಿಸಿದೆ. ಕಟ್ಟಡಗಳನ್ನು ಕಟ್ಟಲು ಅನುಮತಿ ನೀಡುವ ಮುಂಚೆ ಸಂಬಂಧಪಟ್ಟ ರೈಲ್ವೆ ಇಲಾಖೆಯ ಅಧಿಕಾರಿಗಳ ಅಭಿಪ್ರಾಯವನ್ನು ಪಡೆದು, ನಂತರ ನಂತರ ಅನುಮತಿ ಕೊಡಲು ಈ ಮೂಲಕ ತಿಳಿಸಿದೆ. ಸಂಬಂಧಪಟ್ಟ ತಹಸೀಲ್ದಾರರು ಇದನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ, ಮಂಡಲ ಪಂಚಾಯಿತಿಗಳಿಗೂ ತಿಳಿಸುವುದು.

(ಸಹಿ)
ವಿಶೇಷ ಜಿಲ್ಲಾಧಿಕಾರಿಗಳು,
ಹಾಸನ ಜಿಲ್ಲೆ, ಹಾಸನ.

ನಕಲನ್ನು:

1) ಉಪವಿಭಾಗಾಧಿಕಾರಿಗಳು, ಹಾಸನ : ಸಕಲೇಶಪುರ,
2) ಎಲ್ಲಾ ತಹಸೀಲ್ದಾರರುಗಳಿಗೆ,
3) ಹಾಸನ ನಗರ ಸಭಾ ಆಯುಕ್ತರವರಿಗೆ,
4) ನಗರಯೋಜನಾ ಸಹಾಯಕ ನಿರ್ದೇಶಕರು, ಹಾಸನ,
5) ಎಲ್ಲಾ ಪುರಸಭಾ ಮುಖ್ಯಾಧಿಕಾರಿಗಳವರಿಗೆ.

ವಿಶೇಷ ಜಿಲ್ಲಾಧಿಕಾರಿಗಳವರ ಪರವಾಗಿ,
ಹಾಸನ ಜಿಲ್ಲೆ, ಹಾಸನ.